# ಶ್ರಮಿಕರ ಕಣ್ಣೀರು

ಭಾರತದ ಮಾಜಿ ಪ್ರಧಾನಿಗಳೂ ‘ಚಾಚ’ ಎಂದು ಮಕ್ಕಳಿಂದ ಪ್ರೀತಿಯಿಂದ ಕರೆಸಿಕೊಂಡವರೂ ಆದ ಜವಹರಲಾಲ ನೆಹರೂ ಅವರು ‘ದುಡಿಮೆಯಿಂದ ಯಾರೂ ಶ್ರೀಮಂತರಾಗುವುದಿಲ್ಲ; ಉಳಿತಾಯದಿಂದ ಮಾತ್ರ ಶ್ರೀಮಂತರಾಗುತ್ತಾರೆ’ ಎಂದು ಲೌಕಿಕ ಶ್ರೀಮಂತರಾಗುವ ಬಗ್ಗೆ ಅಭಿಪ್ರಾಯಪಟ್ಟಿದ್ದಾರೆ. ಅವರ ಈ ಮಾತನ್ನು ಉಳಿತಾಯ ಮನೋಧರ್ಮವನ್ನು ಬೆಳೆಸಿಕೊಳ್ಳುವ ದಿಸೆಯಲ್ಲಿ ಅರ್ಥಪೂರ್ಣವೆಂದು ಒಪ್ಪಬಹುದು. ಇಂದಿನ ಅಮೇರಿಕಾದ ಆರ್ಥಿಕ ಕುಸಿತದ ಹಿಂದೆ ಅಲ್ಲಿನ ಜನರ ಭೋಗಮುಖತೆಯ ಜೊತೆಗೆ ಅವರ ಉಳಿತಾಯ ಮಾಡದ ಪ್ರವೃತ್ತಿಯ ಕಾರಣವೂ ಒಂದು ಎಂದು ತಜ್ಞರು ಅಭಿಪ್ರಾಯಪಡುತ್ತಾರೆ. ಇದೇ ಕಾರಣಕ್ಕೆ ಜಗತ್ತು ತಲ್ಲಣಗೊಳ್ಳುತ್ತಿದ್ದ ಸಂದರ್ಭದಲ್ಲಿ ಭಾರತೀಯ ಬದುಕಿನ ಸ್ಥಿರತೆಗೆ ಅದರಲ್ಲಿದ್ದ ಉಳಿತಾಯ ಮನೋಧರ್ಮವೇ ಅಡಿಪಾಯವಾಗಿತ್ತೆಂದು ಸಮರ್ಥನೆಯನ್ನೂ ನೀಡುತ್ತಾರೆ.

ನಿಜ, ಭಾರತೀಯ ಬದುಕಿನಲ್ಲಿ ಭವಿಷ್ಯದ ಚಿಂತೆ ವಿವೇಚನೆಯ ಮಟ್ಟದಲ್ಲಿ ಸದಾ ಕೆಲಸ ಮಾಡುತ್ತಿರುತ್ತದೆ. ತನಗಾಗಿ, ತನ್ನ ಕುಟುಂಬದ ಸೌಖ್ಯಕ್ಕಾಗಿ ಹಾಗೂ ಸಮುದಾಯ ಹಿತಕ್ಕಾಗಿ ತನ್ನ ದುಡಿಮೆಯಲ್ಲಿ ತುಸು ಪಾಲನ್ನು ಕಾಯ್ದಿರಿಸಬೇಕೆಂದು ಕೌಟಿಲ್ಯನು ಹೇಳುತ್ತಾನೆ. ಆ ಚಿಂತನಾ ಕ್ರಮವೇ ಚರಿತ್ರೆಯುದ್ದಕ್ಕೂ ಭಾರತೀಯ ಬದುಕಿನ ಮೌಲ್ಯವಾಗಿ ಹರಿಯುತ್ತಾ ಬಂದಿದೆ. ಆದರೆ ಅದು ಸಂಪೂರ್ಣ ವಾಸ್ತವ ಚಿತ್ರವಲ್ಲ; ಅದೊಂದು ಆದರ್ಶವಾಗಿ ಹಲವರ ಬದುಕಿನಲ್ಲಿ ಕನಸಾಗಿಯೇ ಉಳಿದುಬಿಡುತ್ತದೆ. ಏಕೆಂದರೆ ದುಡಿಮೆಗೂ ಸುಖಕ್ಕೂ ಆಗಿಬರದಿರುವ ಸಂಭ್ರಮವೇ ಹೆಚ್ಚು. ದೈಹಿಕ ದುಡಿಮೆಯನ್ನು ಬೌದ್ಧಿಕ ಶಕ್ತಿ ಚರಿತ್ರೆಯುದ್ದಕ್ಕೂ ನಿಕೃಷ್ಟವೂ ಕನಿಷ್ಟವೂ ಆದುದೆಂದು ತೀರ್ಪು ನೀಡಿ ಬಹುಸಂಖ್ಯಾತ ಶ್ರಮಜೀವಿಗಳನ್ನು ದಾಸರನ್ನಾಗಿಸಿಕೊಂಡು ಅತ್ಯಂತ ಕಡಿಮೆ ವೇತನದಲ್ಲಿ ದುಡಿಸಿಕೊಂಡಿದೆ. ಆಧುನಿಕ ಚಿಂತನೆಗಳ ಗಾಳಿ ಬೀಸಿ ಸಮಾನತೆಯ ಮಾತುಗಳನ್ನಾಡುತ್ತಿರುವ ಈ ಸಂದರ್ಭದಲ್ಲೂ ದುಡಿಸಿಕೊಳ್ಳುವ ಯಜಮಾನ್ಯತೆಯೇನೂ ಕಡಿಮೆಯಾಗಿಲ್ಲ. ಪ್ರಕೃತಿಯಲ್ಲಿ ಲಭ್ಯವಾಗುವುದನ್ನು ಮತ್ತು ಬೆಳೆದುದನ್ನು ತಿಂದು ಜೀವಿಸುತ್ತಿದ್ದ ಕಾಲದಿಂದ, ವರ್ತಮಾನದ ಯಂತ್ರ ನಾಗರಿಕತೆಯ ನಿರ್ಮಿತಿಯನ್ನು ಬಳಸುವ ಕಾಲಘಟ್ಟದಲ್ಲೂ ಮೂಲಭೂತ ಅವಶ್ಯಕತೆಗಳು ಅವೇ ಆಗಿವೆ; ಅವುಗಳಲ್ಲಿ ಅಂತಹ ಬದಲಾವಣೆ ಕಂಡುಬಂದಿಲ್ಲ. ಆದರೆ ಬೌದ್ಧಿಕ ಶಕ್ತಿಯಿಂದ ಬದುಕುತ್ತಿರುವ ಅಲ್ಪಸಂಖ್ಯಾತ ಜನರ ಬೇಡಿಕೆಗಳ ಬಾಯಾರಿಕೆಯು ವಿವಿಧ ಸ್ವರೂಪಗಳಲ್ಲಿ ಹೆಚ್ಚುತ್ತಲೇ ಇದೆ. ಈ ಬೇಡಿಕೆ ತೀರದ ಸುಖದ ಹುಡುಕಾಟದಲ್ಲಿರುವಂಥದ್ದು. ಇಂಥ ಹುಚ್ಚು ಸುಖದ ತೃಪ್ತಿಗಾಗಿ ಜಗತ್ತಿನಲ್ಲಿ ಚರಿತ್ರೆಯುದ್ದಕ್ಕೂ ಶ್ರಮಿಕರ ಬೆವರನ್ನು ಕುಡಿಯಲಾಗಿದೆ; ಅವರ ಬದುಕನ್ನು ಕದಿಯಲಾಗಿದೆ.

ನಾವು ಇಂದು ‘ನಮ್ಮ ಸಂಸ್ಕೃತಿ’, ‘ನಮ್ಮ ನಾಗರಿಕತೆ’ ಎಂದು ತೋರಿಸಿ ಹೆಮ್ಮೆಪಡುವ ಬೃಹತ್ ಕಲಾಕೃತಿಗಳನ್ನು ದೇವಸ್ಥಾನ ರೂಪಗಳನ್ನು ಕಟ್ಟಲು ಪ್ರತಿ ಶತಮಾನದಲ್ಲೂ ಅಸಂಖ್ಯಾತ ಜನರು ಹಸಿವು ನೀರಡಿಕೆಗಳಿಂದ ಪ್ರಾಣ ತ್ಯಾಗ ಮಾಡಿದ್ದಾರೆ. ಪ್ರಭುತ್ವ ಮತ್ತು ಪುರೋಹಿತಶಾಹಿ ವರ್ಗಗಳು ಒಗ್ಗೂಡಿ, ಧರ್ಮ ಕರ್ಮ ಪುಣ್ಯ ಎಂಬ ಪ್ರಲೋಭನೆಯನ್ನೊಡ್ಡಿ ಮುಗ್ಧರನ್ನು ದುಡಿಸಿಕೊಂಡಿದ್ದಾರೆ. ಇಲ್ಲವೇ, ಯುದ್ಧದಲ್ಲಿ ಸೆರೆಹಿಡಿದು ಖೈದಿಗಳನ್ನಾಗಿ ಎಳೆತಂದು, ಹೊಡೆದು ಬಡಿದು ತಮ್ಮ ಸಂಸ್ಕೃತಿ ನಾಗರಿಕತೆಗಳ ‘ಬೆಳೆ’ಯನ್ನು ಬೆಳೆದಿದ್ದಾರೆ! ಇದು ನೇರವಾಗಿ ರಕ್ತ ಹೀರಿ ನಗುವ ಕ್ರೌರ್ಯದ ಪರಿ. ಚರಿತ್ರೆ ದುಡಿಯುವ ವರ್ಗವನ್ನು ನಡೆಸಿಕೊಂಡಿರುವುದೇ ಹೀಗೆ! ಅಂಥದ್ದರಲ್ಲಿ ದುಡಿಯುವವನು ಬಾಳಿಯಾನು, ಬೆಳೆದಾನು ಎಂಬ ಮಾತುಗಳು ಧರ್ಮದ ಮುಖವಾಡದ ಮಾತುಗಳಾಗಿ ಶೋಷಣೆಯ ಸಾಧನಗಳಾಗಿವೆ. ಈ ಶೋಷಣೆಯ ಪ್ರಕ್ರಿಯೆಯಲ್ಲಿ ಪ್ರಭುತ್ವದ ಭೋಗಲಾಲಸೆಗಿಂಥ ಭಯಾನಕವಾದುದು ಧರ್ಮದ ನಡೆ! ಅದು ‘ದುಡಿಯುವುದು ಪುಣ್ಯದ ಕೆಲಸ; ಸ್ವರ್ಗ ಪ್ರಾಪ್ತಿಯ ಮೆಟ್ಟಿಲು. ಇಲ್ಲಿ ಈ ದುಡಿಮೆಯಿಂದ ನಿಷ್ಕಾಮ ಮನಸ್ಕನಾಗಿದ್ದರೆ ಸ್ವರ್ಗ ಪ್ರಾಪ್ತಿಯಾಗುತ್ತದೆ. ಅಲ್ಲಿ ನಿಮಗೆ ಅಪರಿಮಿತ ಸುಖ ಲಭ್ಯವಾಗುತ್ತದೆ’ ಎಂಬ ಬಣ್ಣದ ಮಾತುಗಳನ್ನಾಡಿ ಶ್ರಮ ಸಂಸ್ಕೃತಿಯನ್ನು ವಂಚಿಸಿದೆ.

ಚರಿತ್ರೆಯುದ್ಧಕ್ಕೂ ಬಹುಪಾಲು ಶ್ರಮಿಕವರ್ಗ ಹಗಲಿರುಳು ದುಡಿದು ಕಂಗಾಲಾಗಿದೆಯೇ ಹೊರತು ಅದರ ಕೈಯಲ್ಲಿ ಉಳಿತಾಯ ಮಾಡಲು ಸಾಧ್ಯವಾಗಿಲ್ಲ, ತನ್ನ ಮತ್ತು ಮನೆಯವರ ದುಡಿಮೆ ಅವರ ಅರೆಹೊಟ್ಟೆ ತುಂಬಿಸಲು ಸಾಧ್ಯವಾಗಿಲ್ಲ; ಮಾನವಿರಲಿ, ಚಳಿಗಾಳಿ ಬಿಸಿಲುಗಳಿಂದ ರಕ್ಷಿಸುವಂಥ ಬಟ್ಟೆ ಖರೀದಿಸಲು ಸಾಧ್ಯವಾಗಿಲ್ಲ, ಅಂಥವರಲ್ಲಿ ಉಳಿಸುವುದೆಂತು? ಈ ಶ್ರಮ ಸಂಸ್ಕೃತಿಯ ವರ್ಗದ ಬೆವರ ಫಲವನ್ನು ಉಣ್ಣುತ್ತಿರುವ ಶ್ರೀಮಂತರಿಗೆ ಉಳಿಸುವುದು ಸುಲಭ; ಉಳಿತಾಯದ ಮಾತುಗಳನ್ನಾಡುವುದೂ ಸುಲಭ. ಜಗತ್ತಿನಲ್ಲಿ ಕೈಗಾರಿಕಾ ಕ್ರಾಂತಿಯಾದ ನಂತರ ಕಾರ್ಮಿಕರ ಸಂಘಟನೆಗಳು ಒಂದು ತಾತ್ತ್ವಿಕ ಚಿಂತನೆಯ ಆಧಾರದ ಮೇಲೆ ತಮ್ಮ ಹಕ್ಕುಗಳಿಗಾಗಿ ಹೋರಾಡಲು ಪ್ರಾರಂಭವಾದ ಮೇಲೆ ಶ್ರಮಿಕರ ಬದುಕಿನಲ್ಲಿ ಬದುಕನ್ನು ಅನುಭವಿಸುವ ಆಶಾಕಿರಣವೊಂದು ಮೂಡಿತ್ತು. ಆದರೆ ಜ್ಞಾನ– ವಿಜ್ಞಾನ– ತಂತ್ರಜ್ಞಾನಗಳ ಅಭಿವೃದ್ಧಿಯ ಜೊತೆಗೆ ಆ ಆಶಾಕಿರಣಕ್ಕೂ ಮಂಕು ಕವಿಯುತ್ತಿದೆ. ಜಗತ್ತಿನ ಬಹುಪಾಲು ದೇಶಗಳು ಮತ್ತೆ ಮತ್ತೆ ಬಂಡವಾಳಶಾಹಿ ಸಂಸ್ಕೃತಿಯ ಗುಲಾಮರಾಗ ಹೊರಟಿರುವುದು ಶ್ರಮಿಕರ ಬಾಳಿನ ಅರಬರೆ ಬೆಳಕು ಮತ್ತಷ್ಟು ಮಂದವಾಗ ತೊಡಗಲು ಕಾರಣವಾಗಿದೆ.

■ **ಶಿಕಾಕು**

## ಮಾತೇ ಮುತ್ತು

★ ತಿಳಿವಳಿಕೆ ಇಲ್ಲದವನನ್ನು ಒಪ್ಪಿಸುವುದು ಸುಲಭ. ಹೆಚ್ಚು ತಿಳಿದವನನ್ನು ಒಪ್ಪಿಸುವುದು ಇನ್ನೂ ಸುಲಭ. ಆದರೆ ಸ್ವಲ್ಪ ತಿಳಿದುಕೊಂಡು ಅಹಂಕಾರ ಪಡುವ ಮನುಷ್ಯನನ್ನು ಬ್ರಹ್ಮನು ಕೂಡಾ ಒಪ್ಪಿಸಲು ಸಾಧ್ಯವಿಲ್ಲ.

–ನೀತಿ ಶತಕ

★ ಹಣ ದೊರೆಯದಿದ್ದಾಗ ಅದಕ್ಕಾಗಿ ಹಾತೊರೆಯುತ್ತಲೂ, ದೊರಕಿದಾಗ ರಕ್ಷಿಸಲು ಯತ್ನಿಸುತ್ತಲೂ, ಕಳೆದು ಹೋದಾಗ ಗೋಳಾಡುತ್ತಲೂ ಇರುವ ಜನರಿಗೆ ದುಃಖದ ಪರಿಹಾರ ಎಂದು?

–ಭಾರತ ಮಂಜರಿ

★ ಓದದೆ ಇರುವ ಹೊಸ ಪುಸ್ತಕಕ್ಕಿಂತ, ಓದಿ ಓದಿ ಜೀರ್ಣವಾದ ಪುಸ್ತಕ ಹೆಚ್ಚು ಶ್ರೀಮಂತವಾದದ್ದು.

–ಕೀರ್ತಿನಾಥ ಕುರ್ತುಕೋಟಿ

★ ತನ್ನ ಮತ್ತು ಇತರರ ಶಕ್ತಿಯನ್ನರಿಯದೆ ಕುತೂಹಲದಿಂದ ಕೂಡಿದವನಾಗಿ ಮುನ್ನುಗ್ಗುವವನು ಚಿಟ್ಟೆಯು ಬೆಂಕಿಯಲ್ಲಿ ಹೇಗೋ ಹಾಗೆ ನಾಶ ಹೊಂದುತ್ತಾನೆ.

–ಪಂಚತಂತ್ರ

★ ಮನುಷ್ಯನ ಸಹಜವಾದ ಅನುಕರಣ ಮತ್ತು ರಂಜನ ನಾಟಕದ ಮೂಲದಲ್ಲಿದ್ದಾಗ, ಮನುಷ್ಯ ಹುಟ್ಟಿದಂದಿನಿಂದ ನಾಟಕ ಅಸ್ತಿತ್ವದಲ್ಲಿದ್ದಿತು ಎಂದು ಹೇಳಬಹುದು.

–ಶ್ರೀರಂಗ

★ ಜೀವನದಲ್ಲಿ ಹಣವನ್ನಾಗಲೀ, ಸಮಯವನ್ನಾಗಲೀ ಅಪವ್ಯಯ ಮಾಡುವವನು ಸೈತಾನನ ಸಹೋದರ.

–ಕುರಾನ್

★ ಆತ್ಮವೇ ಸ್ವರ್ಗ, ಆತ್ಮವೇ ನರಕ!

–ಉಮರ್ ಖಯಾಮ್

★ ಸಾಧ್ಯವಾದ ಸಂದರ್ಭಗಳಲ್ಲಿ ಸದಾ ನಗುತ್ತಿರು. ಇದೊಂದು ಸುಲಭ ಔಷಧಿ. ಇದೊಂದು ಅರ್ಥ ಮಾಡಿಕೊಳ್ಳಲಾಗದ ದರ್ಶನ ಶಾಸ್ತ್ರ. ಮನುಷ್ಯ ಜೀವನದ ಉಜ್ವಲ ಭಾಗ.

–ಬೈರನ್

★ ಸರ್ಪಕ್ಕೆ ಭಯಪಡುವಂತೆ ಸುಳ್ಳುಗಾರ ಸದಾ ಹೆದರುತ್ತಿರುತ್ತಾನೆ. ಸತ್ಯವೇ ಜಗತ್ತಿನ ಮಹಾನ್ ಧರ್ಮ.

–ವಾಲ್ಮೀಕಿ ರಾಮಾಯಣ

★ ಕೃತಿ ರಚನೆಯಂತೆಯೇ ಕೃತಿಯ ರಸಸ್ವಾದನೆಯೂ ಒಂದು ಸೃಷ್ಟಿಕಾರ್ಯ.

–ಕುವೆಂಪು